# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ

## ಸಿ.ಸಿ. ನಂ. 711 / 2022

ಸಿಡಬ್ಲ್ಯೂ- **10**
ಪಿಡಬ್ಲ್ಯೂ- **03**

ದಿನಾಂಕಃ **03.05.2025.**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

ಸಾಕ್ಷಿಯ ಹೆಸರುಃ - ವಾಸು
ತಂದೆಯ/ಗಂಡನ ಹೆಸರುಃ - ಶಿವಾಜಿ
ವಯಸ್ಸುಃ -? **28** ವರ್ಷ
ಉದ್ಯೋಗಃ - ಲಾರಿ ಚಾಲಕ.
ವಾಸಸ್ಥಳಃ - ಯಾದಗಿರಿ.

ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ

ಚಾಸಾ-1 ಮತ್ತು 9 ರವರ ಪರಿಚಯ ನನಗೆ ಇರುತ್ತದೆ.2 ನೇ ಆರೋಪಿಯ ಪರಿಚಯ ನನಗೆ ಇರುತ್ತದೆ. ಕಳೆದ 2 ವರ್ಷಗಳ ಹಿಂದೆ ವಾಡಿ ರಸ್ತೆಯ ಮೇಲೆ ಗುಲಿಗುಂಜಿ ತಾಂಡಾದ ಕ್ಯಾನಲ್ ಬ್ರಿಡ್ಜ್ ಬಳಿ ಆಟೋ ಮತ್ತು ಲಾರಿ ಮಧ್ಯ ಅಪಘಾತ ಆಗಿತ್ತು. ಗಾಯಾಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋದ ನಂತರ ನಾನು ಅಪಘಾತ ಸ್ಥಳಕ್ಕೆ ಹೋಗಿದ್ದೆ ಲಾರಿ ನಂಬರ ನಾನು ಬರೆದುಕೊಂಡಿರುವುದಿಲ್ಲ. ಆಟೋವನ್ನು ಮಹೇಶ ಚಲಾಯಿಸುತ್ತಿದ್ದನ್ನು. ಆಟೋದ ನಂಬರ ನನಗೆ ಗೊತ್ತಿರುವುದಿಲ್ಲ. ಅಪಘಾತವು ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ ಏಕೆಂದರೆ ನಾನು ಅಪಘಾತ ಸ್ಥಳದಲ್ಲಿ ಇರಲಿಲ್ಲ. ಲಾರಿ ಮತ್ತು ಆಟೋದ ನಂಬರ ನನಗೆ ಗೊತ್ತಿರುವುದಿಲ್ಲ. ಅಪಘಾತವು ಯಾರ ತಪ್ಪಿನಿಂದ ಆಗಿತ್ತು ಎಂದು ನನಗೆ ಯಾರು ಹೇಳಿರುವುದಿಲ್ಲ. ಸದರಿ ಅಪಘಾತದಲ್ಲಿ ಆಟೋದಲ್ಲಿ ಇದ್ದ ಒಬ್ಬ ಪ್ರಯಾಣೀಕರಿಗೆ ಗಾಯ ಆಗಿ ಅವರು ಮೃತಪಟ್ಟಿದದರು. ಸದರಿ ಮೃತಪಟ್ಟ ವ್ಯಕ್ತಿಯ ಹೆಸರು ನನಗೆ ಗೊತ್ತಿರುವುದಿಲ್ಲ. ನಾನು ಪೊಲೀಸರು ಮುಂದೆ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲಕರ ಸಾಕ್ಷ್ಯವನ್ನು ನುಡಿದ ಕಾರಣ ಸ.ಸ.ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. )

ಪಾಟೀ ಸವಾಲುಃ ಸ.ಸ.ಅ ರವರಿಂದಃ

ದಿನಾಂಕಃ 10.04.2022 ರಂದು ಬೆಳಗ್ಗೆ 6-50 ಗಂಟೆಗೆ ಚಾಸಾ-1 ಮತ್ತು 9 ರವರು ನನಗೆ ತಿಳಿಸಿದ್ದೇನೆಂದರೆ ಯಾದಗಿರಿ - ವಾಡಿ ಮುಖ್ಯ ರಸ್ತೆಯ ಮೇಲೆ ವೆಂಕಟೇಶ ನಗರ ತಾಂಡಾ ಹತ್ತಿರ 2 ನೇ ಆರೋಪಿತನ ಆಟೋ ಅಪಘಾತ ಆಗಿದ್ದೆ ಎಂದು ನನಗೆ ತಿಳಿಸಿದ್ದರು ಎಂದರೆ ಸರಿ. ನಂತರ ನನ್ನ ಆಟೋದಲ್ಲಿ ಅವರನ್ನು ಕರೆದುಕೊಂಡು ಯಾದಗಿರಿ - ವಾಡಿ ಮುಖ್ಯ ರಸ್ತೆಯ ವೆಂಕಟೇಶ ನಗರ ತಾಂಡಾ ದಾಟಿ ನಂತರ ತಾಯಮ್ಮ ಗುಡಿ ಹತ್ತಿರ ಹೋಗಿ ನೋಡಲಾಗಿ ರಸ್ತೆಯ ಕ್ಯಾನಲ್ ಬ್ರಿಡ್ಜ್ ನ ಮೇಲೆ ಲಾರಿ ನಂಬರ ಎಂಹೆಚ್-42-ಟಿ-7338 ಇದರ ಮುಂದುಗಡೆಯ ಕೆಳಭಾಗದಲ್ಲಿ 2 ನೇ ಆರೋಪಿತನ ಆಟೋ ನಂಃ ಕೆಎ-33-ಬಿ-0947 ನೇದ್ದು ಸಿಕ್ಕಿಕೊಂಡು ಅದರಲ್ಲಿ ಒಬ್ಬ ವ್ಯಕ್ತಿಯ ಬಾರಿ ರಕ್ತಗಾಯ ಆಗಿ ಮೃತಪಟ್ಟಿದ್ದ ಎಂದರೆ ಸಾಕ್ಷಿಯು ನಾನು ಅಪಘಾತವನ್ನು ನೋಡಿರುವುದಿಲ್ಲ ಎಂದು ಹೇಳುತ್ತಾರೆ. ನಂತರ ರಸ್ತೆಯ ಪಕ್ಕದದಲ್ಲಿ ಇರುವ ಮುಳ್ಳುಕಂಟೆಯಲ್ಲಿ 2 ನೇ ಆರೋಪಿತನು ಬಿದಿದ್ದನ್ನು ಆತನನ್ನು ಎಬಿಸ್ಸಿ ಹೊರಗಡೆ ಕರೆದುಕೊಂಡು ಬಂದು ಉಪಚಾರಿಸಿದ್ದೇವು ಎಂದರೆ ಸರಿಯಲ್ಲ. ಆ ಕಾಲಕ್ಕೆ ಅಪಘಾತ ನಡೆದ ಬಗ್ಗೆ 2 ನೇ ಆರೋಪಿತನು ನನಗೆ ಅಪಘಾತದ ಕುರಿತು ತಿಳಿಸಿದ್ದನ್ನು ಎಂದರೆ ಸರಿಯಲ್ಲ. ಅಪಘಾತವಾದ ದಿನದಂದು ಬೆಳಗ್ಗೆ 5 ಗಂಟೆಗೆ 2 ನೇಆರೋಪಿತನು ಮೃತ ಇನ್ಸದ್ ಅಲಿ ಇವರನ್ನು ತನ್ನ ವಾಹನದಲ್ಲಿ ಹತ್ತಿಸಿಕೊಂಡು ಯಾದಗಿರಿ - ವಾಡಿ ಮುಖ್ಯ ರಸ್ತೆಯ ವೆಂಕಟೇಶ ತಾಂಡಾ ದಾಟಿ ಹೋಗುವಾಗ ಬೆಳಗ್ಗೆ 5-30 ಒಬ್ಬ ಲಾರಿ ಚಾಲಕನು ತನ್ನ ಲಾರಿಯನ್ನು ಅತೀ ವೇಗ ಮತ್ತು ಅಲಕ್ಷ್ಯತನದಿಂದ ಚಲಾಯಿಸಿಕೊಂಡು ಬಂದು 2 ನೇ ಆರೋಪಿತನ ಆಟೋಕ್ಕೆ ಡಿಕ್ಕಿಪಡಿಸಿರುತ್ತಾನೆ ಎಂದು ತಿಳಿಸಿರುತ್ತಾನೆ ಎಂದರೆ ಸರಿಯಲ್ಲ. ಆಗ ಆಟೋ ಅಪಘಾತದ ರಭಸಕ್ಕೆ ಪುಟಿದ್ದು ಮುಳ್ಳುಗಂಟೆಯಲ್ಲಿ ಬಿದ್ದಿರುತ್ತದೆ ಎಂದು ತಿಳಿಸಿದ್ದನ್ನು ಎಂದರೆ ಸರಿಯಲ್ಲ. ಅದರಲ್ಲಿ ಇದ್ದ ಇನ್ಸದ್ ಅಲಿ ತಂದೆ ಹಜರತ್ ಅಲಿ ಮೆಕ್ರಾಣಿ ರವರಿಗೆ ಭಾರಿ ಗಾಯಗಳಾಗಿ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾನೆ ಎಂದು ತಿಳಿಸಿದ್ದನ್ನು ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ 2 ನೇ ಆರೋಪಿತನಿಗೆ ಎಡಗಾಲಿನ ಪಾದಕ್ಕೆ ಭಾರೀ ರಕ್ತಗಾಯ, ಕಲೆಗೆ, ಮುಖಕ್ಕೆ ಕೈಗಳಿಗೆ ಭಾರೀ ರಕ್ತ ಗಾಯಗಳು ಆಗಿದ್ದವು ಎಂದರೆ ಸಾಕ್ಷಿಯು ನಾನು ಆಸ್ಪತ್ರೆಯಲ್ಲಿ ನೋಡಿರುತ್ತೇನೆ ಎಂದು ಹೇಳುತ್ತಾರೆ. ಅಪಘಾತದಲ್ಲಿ ಮೃತಪಟ್ಟ ಇನ್ಸದ್ ಅಲಿ ರವರ ಮುಖಕ್ಕೆ ಕೈಗಳಿಗೆ ಭಾರೀ ರಕ್ತಗಾಯ ಆಗಿದ್ದು ಬಲಕಾಲು ತೊಡೆಸೀಲಿ ಭಾರೀ ರಕ್ತಗಾಯ ವಾಗಿರುವ ಬಗ್ಗೆ ಕಂಡು ಬಂದಿತ್ತು ಎಂದರೆ ಸಾಕ್ಷಿಯು ನಾನು ನೋಡಿರುವುದಿಲ್ಲ ಎಂದು ಹೇಳುತ್ತಾರೆ. ಅಪಘಾತ ಪಡಿಸಿದ ಲಾರಿ ನಂಬರ ಎಂಹೆಚ್-42-ಟಿ-7338 ಇದ್ದು ಚಾಲಕನ ಹೆಸರು ಶ್ಯಾಮ್ ಸುಂದರ ಎಂದು ತಿಳಿಸಿದ್ದನ್ನು ಎಂದರೆ ಸರಿಯಲ್ಲ. ಅಪಘಾತ ಆದ ನಂತರ ಅಪಘಾತ ಸ್ಥಳಕ್ಕೆ 108 ತುರ್ತು ಚಿಕಿತ್ಸಾ ವಾಹನ ಬಂದಿತ್ತು

ಅದರಲ್ಲಿ 2 ನೇ ಆರೋಪಿತರನು ಉಪಚಾರಕ್ಕಾಗಿ ಯಾದಗಿರಿ ಜಿಲ್ಲಾ ಆಸ್ಪತ್ರೆಗೆ ನಾವು ಕಳುಹಿಸಿದ್ದೇವು ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರೆದು  ನಾನು ನೇರವಾಗಿ ಆಸ್ಪತ್ರೆಗೆ ಹೋಗಿರುತ್ತೇನೆ ಎಂದು ಹೇಳುತ್ತಾರೆ. ದಿನಾಂಕಃ 13.04.2022 ರಂದು ನಾನು ಪೋಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದರೆ ಸರಿ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಬಿ.ಬಿ.ಕೆ.ರವರಿಂದಃ

ಅಪಘಾತದ ಕುರಿತು ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಎಂದಿಗೂ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ ಎಂದರೆ ಸರಿ. ದಿನಾಂಕಃ 13.04.2022 ರಂದು ನೀವು ಪೊಲೀಸರ ಮುಂದೆ ಹೇಳಿಕೆಯನ್ನುಕೊಟ್ಟಿರುತ್ತೀರಿ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿಯು ನನಗೆ ನೆನಪಿರುವುದಿಲ್ಲ ಎಂದು ಹೇಳುತ್ತಾರೆ, ನಂತರ ಅವರು ಇಲ್ಲ ಎಂದು ಹೇಳುತ್ತಾರೆ.

ಮರು ವಿಚಾರಣೆಃ ಇಲ್ಲಃ

( ತೆರೆದ ನ್ಯಾಯಾಲಯದಲ್ಲಿ  ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.